ಪ್ರಕರಣವನ್ನೂ, ಅದಕ್ಕೆ ಚಿಕ್ಕಮ್ಮನ ಪ್ರತಿಕ್ರಿಯೆಯನ್ನೂ ವಿವರಿಸಿ ಹೇಳಿದಳು.

'ನನ್ನ ಅನುಮಾನ ನಿಜವಾಯ್ತು ಋತು, ನಿಮ್ಮ ಕೋಟೆ ಬಂಗ್ಲೇಲಿ ಅಸಹಜವಾದ ಯಾವುದೋ ಒಂದು ವಿಷ್ಯ ನಡೀತಿದೆ, ನಿನ್ನ ಚಿಕ್ಕಮ್ಮನ ಮೇಲೆಯೇ ನಂಗೆ ಹೆಚ್ಚು ಅನುಮಾನವಿದೆ, ನೋಡೋಣ....ನಿಮ್ಮ ಬಂಗಲೆಯ ಕಥೆಗೆ ಯಾವ ಟ್ವಿಸ್ಟ್ ಸಿಗುತ್ತೋ ಗೊತ್ತಿಲ್ಲ, ನೀನು ಮಾತ್ರ ಹುಷಾರಾಗಿರು ಡಿಯರ್, ಯಾರು ಯಾವ ರೀತೀಲಿ ಡಿಸ್ಟರ್ಬ್ ಮಾಡಿದ್ರೂ ನಮ್ಮಿಬ್ರನ್ನು ಯಾರಿಂದಲೂ ದೂರ ಮಾಡೋಕಾಗಲ್ಲ, ಐ ಲವ್ ಯೂ, ಇನ್ನು ಮಲಗು, ಸ್ವೀಟ್ ಡ್ರೀಮ್ಸ್.' ಎಂದು ಹೇಮಂತ ಕರೆಯನ್ನು ತುಂಡರಿಸಿದಾಗ ನಿಟ್ಟುಸಿರಿಟ್ಟಳು ಋತು. ಎಲ್ಲರ ಅನುಮಾನದ ಮುಳ್ಳು ಚಿಕ್ಕಮ್ಮನತ್ತಲೇ ಸಾಗುತ್ತಿವೆ. ಆದರೆ ತನಗೇಕೆ ಅವಳ ಮೇಲೆ ಅನುಮಾನ ಪಡಲಾಗುತ್ತಿಲ್ಲ?

ಅವಳು ಮಲಗಲು ಬರುವ ವೇಳೆಗೆ ರಮ್ಯ ಗಾಢವಾಗಿ ನಿದ್ರಿಸಿದ್ದಳು. ಮರವೊಂದರಿಂದ ಗೂಬೆಯ ಧ್ವನಿ ಭಯಂಕರವಾಗಿ ಕಿವಿಗೆ ಬೀಳತೊಡಗಿದಾಗ ಅವ್ಯಕ್ತ ಭೀತಿಯಿಂದ ಗಡಗಡನೆ ನಡುಗಿದಳು ಅವಳು.

* * *

**ಅಪ್‌ಸೆಟ್ ಆದ ಹೇಮಂತ**

ತನ್ನ ಮೆಚ್ಚಿದ ಹುಡುಗಿಗೆ ಸ್ವೀಟ್ ಡ್ರೀಮ್ಸ್ ಹೇಳಿ ಹೇಮಂತ ಕರೆಯನ್ನೇನೋ ತುಂಡರಿಸಿದ. ಆದರೆ ಅವನಿಗೆ ತಕ್ಷಣ ನಿದ್ರಿಸಲಾಗಲಿಲ್ಲ. ಋತು ಹೇಳಿದ ವಿಷಯವೇ ತಲೆಯೊಳಗೆ ಕೊರೆಯತೊಡಗಿತ್ತು. ತಾನು ಆ ಬಂಗಲೆಯ ಅಳಿಯನಾಗಬಾರದೆಂದು ಯಾವುದೋ ಅದೃಶ್ಯ ಶಕ್ತಿ ಯತ್ನಿಸುತ್ತಿರುವುದು ಋತುವಿನ ಮಾತಿನಿಂದ ನಿಚ್ಚಳವಾಗಿತ್ತು. ಬಂಗಲೆಯಲ್ಲಿ ಜನರಿಲ್ಲದ ವೇಳೆಯಲ್ಲಿ ಮರಕ್ಕೆ ಬೆಂಕಿ ತಗುಲಿದ್ದು, ತಾನು ಬಂಗಲೆಗೆ ಕಾಲಿರಿಸುವ ವೇಳೆಗೆ ಕಪ್ಪು ಬೆಕ್ಕು ದೇವರ ಕೋಣೆಗೆ ನುಗ್ಗಿದ್ದು, ಟೆರೇಸಿನಲ್ಲಿ ವ್ಯಕ್ತಿಯೊಂದು ತಮ್ಮನ್ನು ಗಮನಿಸುತ್ತಿದ್ದುದು, ತಾನು ಮನೆಗೆ ಹಿಂದಿರುಗುವಾಗ ವ್ಯಕ್ತಿಯೊಂದು ದಾಳಿ ಮಾಡಿದ್ದು ಆಕಸ್ಮಿಕವಲ್ಲ ಎಂದೆನಿಸತೊಡಗಿತ್ತು.

ಹಾಗೆ ತನ್ನನ್ನು ಕೋಟೆ ಬಂಗಲೆಯ ಅಳಿಯನಾಗದಂತೆ ತಡೆಯುತ್ತಿರುವ ಆ ಶಕ್ತಿ ಯಾವುದು? ಕಲಾವತಿ....ಸದ್ಯಕ್ಕೆ ಆಕೆಯ ಮೇಲೆಯೇ ಅನುಮಾನ ಹೆಚ್ಚುತ್ತಿದೆ. ಏಕೆಂದರೆ ತನ್ನ ಹಾಗೂ ಋತುವಿನ ಮದುವೆಗೆ ಅವಳು ಆಕ್ಷೇಪ ವನ್ನು ಎತ್ತಿದ್ದಾಳೆ. ಅಲ್ಲಿ ಆ ಕೋಟೆ ಬಂಗಲೆಯಲ್ಲಿ ಯಾವುದೋ ನಿಗೂಢತೆಯಿದೆ ಎಂದು ಮತ್ತೆ ಮತ್ತೆ ಅನ್ನಿಸುತ್ತಿದೆ. ಆ ನಿಗೂಢತೆ ಮಗುವಿನ ಮನಸ್ಸಿನ ಋತುವಿಗೆ ಯಾವ ತೊಂದರೆಯನ್ನು ಮಾಡದಿದ್ದರೆ ಸಾಕು. ಕೋಟೆ ಬಂಗಲೆಯ ಜನರನ್ನು ಇನ್ನು ಸೂಕ್ಷ್ಮವಾಗಿ ಗಮನಿಸಬೇಕೆಂದುಕೊಂಡ ಹೇಮಂತ.

ಇದಲ್ಲದೆ ಪ್ರಶಾಂತನ ಕೊಲೆಯ ತನಿಖೆಯೂ ಜಟಿಲವಾಗುತ್ತಿದೆ. ಡಿ.ಎಸ್ಪಿ ಹರಿಕುಮಾರ್ ಹಿಂದಿನ ದಿನ ಅಜಯ್ ಕುಲಕರ್ಣಿಯನ್ನು ಕರೆಸಿ ತನಿಖೆ ಯಾವ ಹಂತದಲ್ಲಿದೆ ಎಂದು ವಿಚಾರಿಸಿದ್ದರು. ಅದರ ಬಗ್ಗೆ ಮಾತನಾಡುವುದ ಕ್ಕಾಗಿಯೇ ಈ ದಿನ ಬೆಳಿಗ್ಗೆ ಅವನು ಹೇಮಂತನನ್ನು ತನ್ನ ಮನೆಗೆ ಕರೆಸಿಕೊಂಡಿದ್ದ.

'ಹೈಯರ್ ಆಫೀಸರ್ಸ್ ಕಡೆಯಿಂದ ಪ್ರೆಷರ್ ಹೆಚ್ಚಾಗ್ತಿದೆ ಹೇಮಂತ್, ಇನ್ನೂ ಕೊಲೆಗಾರನ ಬಗ್ಗೆ ಯಾವ ಯಾವುದೇ ಕ್ಲೂ ಸಿಕ್ಕಿಲ್ಲವಲ್ಲ. ಕಾಲೇಜಿನ ಮ್ಯಾನೇಜ್‌ಮೆಂಟಿನವರೂ ಪ್ರೆಷರ್ ಹಾಕ್ತಿದ್ದಾರೆ, ಮುಂದೇನು ಮಾಡ್ಬೇಕೂಂತ ಗೊತ್ತಾಗ್ತಿಲ್ಲ, ನಿನ್ನ ಕಡೆಯಿಂದ್ಲೂ ಇಂಪ್ರೂವ್‌ಮೆಂಟ್ ಇಲ್ಲ' ಎಂದು ನೊಂದುಕೊಂಡಿದ್ದ ಅಜಯ್ ಕುಲಕರ್ಣಿ.

ಬಹಳಷ್ಟು ಕೊಲೆಗಳ ತನಿಖೆಯಲ್ಲಿ ನಿರಾಯಾಸವಾಗಿ ಅಪರಾಧಿಗಳನ್ನು ಪತ್ತೆ ಹಚ್ಚಿದ್ದ ಹೇಮಂತನಿಗೂ ಗೆಳೆಯನ ಮಾತಿನಿಂದ ಅಪಮಾನ ವಾದಂತಾಗಿತ್ತು. ಅವನೂ ಕೈಲಾದ ಪ್ರಯತ್ನಪಡುತ್ತಿದ್ದ. ಆದರೆ ಕೇಸು ಯಾವುದೇ ಮುನ್ನಡೆಯನ್ನೂ ಕಂಡಿರಲಿಲ್ಲ.

'ಅಜಯ್....ಯೋಚ್ನೆ ಮಾಡ್ಬೇಡ, ಸದ್ಯಕ್ಕೆ ಕೊಲೆಗಾರ ಯಾವುದೇ ಸುಳಿವನ್ನೂ ಬಿಟ್ಟಿಲ್ಲ, ನೋಡೋಣ....ಪತ್ತೆಗೆ ಹೊಸ ರೀತಿಯಲ್ಲಿ ಪ್ರಯತ್ನ ಪಡೋಣ...' ಎಂದು ಧೈರ್ಯ ತುಂಬಿದ್ದ. ಈ ಕೇಸು ಅವನಿಗೂ ಸವಾಲಾಗಿ ಪರಿಣಮಿಸಿತ್ತು.

ಒಂದು ಕಡೆ ಕೋಟೆ ಬಂಗಲೆ ಉನ್ನತಿಯ ನಿಗೂಢತೆ, ಇನ್ನೊಂದು ಕಡೆ ಕೊಲೆಗಾರನ ಪತ್ತೆಗಿರುವ ಅಡೆ ತಡೆ....ಯೋಚಿಸುತ್ತಲೇ ಇದ್ದ ಹೇಮಂತನಿಗೆ ರಾತ್ರಿ ಯಾವುದೋ ಒಂದು ಹೊತ್ತಿನಲ್ಲಿ ನಿದ್ರೆ ಬಂದಿತ್ತು.

* * *

ಇತ್ತ ಹುಡುಗರ ಹಾಸ್ಟೆಲ್ಲಿನಲ್ಲಿ ಮೊದಲನೆಯ ವರ್ಷದ ಬಿ.ಕಾಂನಲ್ಲಿದ್ದ ಸ್ವರೂಪ್ ಬಹಳ ಹೊತ್ತಿನವರೆಗೂ ಓದುತ್ತಿದ್ದು ದೀಪವಾರಿಸಿ ಮಲಗಿದ. ಅವನ ರೂಂ ಮೇಟ್ ಪ್ರದೀಪನಾಗಲೇ ಗಾಢ ನಿದ್ರೆಯಲ್ಲಿದ್ದ. ಸೋತು ಮಲಗಿದವನಿಗೆ ಕಿಟಕಿಯಲ್ಲಿ ಎಂಥದೋ ಸಳಪಳವೆಂದು ಸಪ್ಪಳವಾಯಿತು. ಹಿಂದೆಯೇ ಯಾರೋ ನಡೆದು ಬರುತ್ತಿರುವ ಸದ್ದು..

ಗಾಬರಿಯಿಂದ ಸದ್ದು ಬಂದೆಡೆಗೆ ನೋಡಿದನು ಸ್ವರೂಪ್. ಮಸುಕು ಬೆಳಕಿನಲ್ಲಿ ತೋಳ ಮನುಷ್ಯನೊಬ್ಬ ತನ್ನ ಹತ್ತಿರ ಬರುತ್ತಿರುವುದನ್ನು ಕಂಡು ಭೀತಿಯಿಂದ ಅವನ ಕಣ್ಣುಗಳು ಅಗಲವಾದವು. ಹಾಸ್ಟೆಲ್ಲಿನಲ್ಲಿ ಒಂದು ಕೊಲೆ ನಡೆದಿದೆ...ಇನ್ನೊಂದು ಕೊಲೆ ನಡೆಯಲಿದೆ....ಅದು ತಾನೇ.... ಇಲ್ಲ, ತಾನು ಈ ತೋಳ ಮನುಷ್ಯನಿಗೆ ಬಲಿಯಾಗಬಾರದು....ಏನಾದರೂ ಮಾಡಬೇಕು. ಅವನು ಯೋಚಿಸತೊಡಗಿದ್ದ ಹೊತ್ತಿನಲ್ಲೇ ಆ ತೋಳ ಮನುಷ್ಯ ಸ್ವರೂಪನ ಮೇಲೆ ಎಗರಿತ್ತು. ಅದರ ಚೂಪಾದ ಕೋರೆಹಲ್ಲುಗಳು ಅವನ ಕತ್ತಿನಾಳಕ್ಕಿಳಿಯಲು ಪ್ರಯತ್ನಿಸುವಾಗಲೇ ಸ್ವರೂಪ ತನ್ನ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿಕೊಂಡು ಆ ತೋಳ ಮನುಷ್ಯನ ಮುಖವಾಡವನ್ನು ಕಿತ್ತು ದೂರ ಬಿಸುಟ. ರುದ್ರಾಕ್ಷಿಯ ಸರದಂತಹುದೇನೋ ಮುಖಕ್ಕೆ ತಗುಲಿತು. ಅದನ್ನೂ ಕಡಿದು ಹಾಕಿದ. ಆ ವ್ಯಕ್ತಿಯ ತಲೆಗೂದಲನ್ನು ಬಲವಾಗಿ ಜಗ್ಗಿದ. ಒಂದಷ್ಟು ಜೊಂಪೆ ಕೂದಲು ಅವನ ಮುಷ್ಟಿಯೊಳಗೆ ಸಿಕ್ಕಿತು. ತನ್ನ ಮೇಲೆ ನಡೆದ ಈ ಆಕ್ರಮಣದಿಂದ ಆ ತೋಳ ಮನುಷ್ಯ ವ್ಯಗ್ರನಾಗಿ ಮತ್ತೆ ಸ್ವರೂಪನ ಯಾವ ಹೋರಾಟಕ್ಕೂ ಆಸ್ಪದವಿಲ್ಲದಂತೆ ಅವನ ಕುತ್ತಿಗೆಯನ್ನು ಕಚ್ಚಿ ಗಾಯಗೊಳಿಸಿ ಅದರ ಮೂಲಕ ಬಿಸಿರಕ್ತವನ್ನು ಹೀರತೊಡಗಿತು...

ಹತ್ತು ನಿಮಿಷಗಳ ಯಮಯಾತನೆಯ ನಂತರ ಸ್ವರೂಪನ ಪ್ರಾಣಪಕ್ಷಿ ಹಾರಿ ಹೋಯಿತು. ಕಬ್ಬಿನ ಜಲ್ಲೆಯಿಂದ ರಸವನ್ನು ಹೀರಿದಂತೆ ಅವನ ದೇಹದ ಪೂರ್ತಿ ರಕ್ತವನ್ನು ಹೀರಿದ ಆ ವ್ಯಕ್ತಿ ಆತನ ದೇಹವನ್ನು ಬಗೆದು ಹಾಕಿ ಹೊರಡಲೆಂದು ಮೇಲೇಳುವಾಗಲೇ ರೂಂಮೇಟ್ ಪ್ರದೀಪನಿಗೆ ಎಚ್ಚರ ವಾಯಿತು. ಅವನು ಸ್ವರೂಪನ ತರಗತಿಯೇ ಆಗಿದ್ದಾನೆ. ನಡೆದ ಸದ್ದು ಗದ್ದಲದಿಂದ ಎಚ್ಚರವಾದ ಅವನು ಯಾವುದೋ ಒಂದು ಆಕೃತಿ ರೂಮಿನಲ್ಲಿ ರುವುದನ್ನು ಕಂಡ. ಇದ್ದುದರಲ್ಲಿ ಧೈರ್ಯದ ಸ್ವಭಾವದ ಅವನು 'ಏಯ್, ಯಾರದು?' ಎಂದು ಧ್ವನಿ ಎತ್ತರಿಸಿ ಕೂಗಿದ. ಅವನ ಕೂಗು ಕ್ಯಾಂಪಸ್ಸಿನ ಮರಗಿಡಗಳನ್ನು ಬಡಿದು ತಟಸ್ಥವಾಯಿತು. ಯಾರೂ ಅದನ್ನು ಗಮನಿಸಲಿಲ್ಲ.

ಅಷ್ಟೇ....ಮಿಂಚಿನ ವೇಗದಲ್ಲಿ ಆ ವ್ಯಕ್ತಿ ಅವನ ಮೇಲೂ ದಾಳಿ ಮಾಡಿ ಒಂದೇ ನೆಗೆತಕ್ಕೆ ಅವನ ಕುತ್ತಿಗೆಗೆ ಬಾಯಿ ಹಾಕಿ ರಕ್ತ ಹೀರತೊಡಗಿತ್ತು. ಹತ್ತೇ ನಿಮಿಷದೊಳಗೆ ತನ್ನ ಕೆಲಸ ಮುಗಿಸಿಕೊಂಡು ತೃಪ್ತಿಯಿಂದ ತೇಗುತ್ತಾ ಬಂದಂತೆಯೇ ಹೊರಟುಹೋಯಿತು.

ಕಾಲೇಜಿನ ಕ್ಯಾಂಪಸ್ಸಿನಲ್ಲಿ ಪೊಲೀಸ್ ಕಾವಲಿತ್ತು. ಕಾಲೇಜಿನ ಭದ್ರತಾ ಸಿಬ್ಬಂದಿಗಳೂ ಇದ್ದರು. ಇಷ್ಟು ಸಾಲದೆಂಬಂತೆ ಸಿ.ಸಿ.ಕ್ಯಾಮೆರಾಗಳು ಇದ್ದವು. ಆದರೆ ಇವ್ಯಾವುದೂ ಕೊಲೆಗಾರನನ್ನು ತಡೆಯಲು ಶಕ್ಯವಾಗಲಿಲ್ಲ. ಏಕೆಂದರೆ ಸ್ವರೂಪ– ಪ್ರದೀಪರಿದ್ದ ರೂಮಿನ ಕಿಟಕಿಯ ಪಕ್ಕದಲ್ಲಿ ದೊಡ್ಡದೊಂದು ಮರವಿತ್ತು. ಅದರ ದಟ್ಟ ಟೊಂಗೆಗಳು ರೂಮನ್ನು ಪೂರ್ತಿ ಆವರಿಸಿದ್ದವು. ಹಾಗಾಗಿ ಅಲ್ಲಿ ಯಾರೇ ಅಡಗಿಕೊಂಡರೂ ತಿಳಿಯುವಂತಿರಲಿಲ್ಲ. ಇದನ್ನು ತೋಳ ಮನುಷ್ಯ ಸರಿಯಾಗಿಯೇ ಉಪಯೋಗಿಸಿಕೊಂಡಿದ್ದ. ಮತ್ತೆರಡು ಭೀಕರ ಜೋಡಿ ಕೊಲೆಗಳು ಅಲ್ಲಿ ನಡೆದೇ ಹೋಗಿದ್ದವು.

* * *

ಸೋಮವಾರ....ಬೆಳಗಿನ ಒಂಬತ್ತು ಗಂಟೆಯ ಸಮಯ.

ಜ್ಞಾನದೇಗುಲ ಕಾಲೇಜಿನ ಹುಡುಗರ ಹಾಸ್ಟೆಲ್ಲಿನಲ್ಲಿ ಮತ್ತೆರಡು ಜೋಡಿ ಕೊಲೆಗಳು ನಡೆದಿರುವ ವಿಷಯ ಮಿಂಚಿನಂತೆ ಹರಡಿಹೋಗಿತ್ತು. ಹುಡುಗ ರನ್ನು ಬೆಳಗಿನ ತಿಂಡಿಗೆ ಕರೆಯಲೆಂದು ಹೋದ ಹಾಸ್ಟೆಲ್ಲಿನ ನೌಕರನಿಂದ ಕೊಲೆಯ ಪ್ರಕರಣ ಬೆಳಕಿಗೆ ಬಂದಿತ್ತು. ಇಡೀ ನಗರವನ್ನೇ ಆ ಸುದ್ದಿ ತಲ್ಲಣಗೊಳಿಸಿತ್ತು. ವಿವಿಧ ಮಾಧ್ಯಮಗಳ ಪ್ರತಿನಿಧಿಗಳು ಕ್ಯಾಂಪಸ್ಸಿನ ಆವರಣದೊಳಗೆ ಕಿಕ್ಕಿರಿದು ತುಂಬಿದ್ದರು. ವಿದ್ಯಾರ್ಥಿಗಳು ಭಯಭೀತರಾಗಿ ನಿಂತಿದ್ದರೆ, ಕಾಲೇಜಿನ ಆಡಳಿತ ಮಂಡಳಿ ಹಾಗೂ ಉಪನ್ಯಾಸಕರು ಆತಂಕದಿಂದ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದರು.